ಇದ್ದ. ಹಾಸಿನಿ ಸಹಜವಾಗೆ ವರ್ತಿಸುತ್ತಿದ್ದಳು. ಮನದೊಳಗಿನ ಗಾಯ ಹೊರಗೆ ಕಾಣದಂತಿರಲು ಪ್ರಯತ್ನಿಸುತ್ತಿದ್ದ ಘನಶ್ಯಾಮ. ನಾಕುದಿನದ ಅನಂತರ ಮಿರಿಕ್ ಗಿರಿಧಾಮದ ಪ್ರೋಗ್ರಾಮಿತ್ತು. ವಿಶಾಲವಾದ ಮಿರಿಕ್ ಸರೋವರಕ್ಕೆದುರಾಗಿ ನಿಂತ ಹೋಟೆಲ್. ಊಟ ಮುಗಿಸಿ ರೂಮಿಗೆ ಬಂದಿದ್ದರು. ಕಿಟಕಿಯಲ್ಲಿ ಹೊರಗೆ ನೋಡುತ್ತ ನಿಂತಿದ್ದ ಘನಶ್ಯಾಮ. ಮೊಬೈಲ್ ಸದ್ದುಮಾಡಿತು. ಆ ಕಡೆಯ ಸ್ವರ ಅಪರಿಚಿತವಾಗಿತ್ತು. ಉದ್ದೇಶಪೂರ್ವಕ ಮೆತ್ತಗೆ ಮಾತಾಡುತ್ತಿದ್ದಂತಿತ್ತು. 'ರಾಂಗ್ ನಂಬರು ಅಂದ್ಕೋಬೇಡ, ನಿಂಗೇ ಮಾಡಿದ್ದು ಘನಶ್ಯಾಮ್. ಮದುವೆ ಸುಖದಲ್ಲಿ ಎರಡು ದಿನ ಕಳೀಲಿ ಅಂತಾನೆ ತಡೆದು ಈಗ ಮಾಡಿದ್ದು...' ಪಿಸುದನಿಯಲ್ಲಿ ಮಾತಾಡತೊಡಗಿದ. 'ಅಲ್ಲಿದಾಳ ನಿನ್ನ ಮುದ್ದುಮಡದಿ? ಚಂದ ಇದಾಳೆ ಅಲ್ವ?' ಇವನಿಗೆ ಸಿಟ್ಟೇರಿ 'ಏ...' ಅನ್ನುತ್ತಿದ್ದಂತೆ ಆ ಕಡೆ, 'ಸಿಟ್ಯಾಕೆ ಮಾಡಕೋತೀಯ? ಅವಳ ಮೊದಲ ಮುತ್ತು ಪಡೆದೋನು ನಾನು ಕಣೋ, ಪ್ರೀತಿಸಿದ್ದು ನನ್ನ. ಅವಳ ಇಂಚಿಂಚೂ ಮೊದಲು ನೋಡಿದೋನು ನಾನು ವರ್ಣಿಸಲಾ... ಅವಳ ಬ್ರಾದ ಕಪ್ ಸೈಜು 32. ಅವಳ ಅಳತೆ ಹೇಳಲಾ? ಬೇಕಿದ್ದರೆ ಅಳೆದು ರುಜುವಾತು ಮಾಡಿಕೊ. ಅವಳು ನನ್ನಲ್ಲಿ ಹ್ಯಾಗೆ ಬೆರೀತಿದ್ಲು ಗೊತ್ತೇನೋ? ನಿನಗೀಗ ಸಿಗತಿರೋದು ಎಂಜಲು. ನಿನ್ನ ಹಣೆಬರ, ನಿಂಗೊಂದು ಅಂತಸ್ತು ಬೇಕಾಗಿತ್ತು...' ಆಕಡೆಯಿಂದ ಸುಮಂತ ವ್ಯಂಗ್ಯದಲ್ಲಿ ವರ್ಣನೆ ಮಾಡುತ್ತಲೆ ಇದ್ದ. ಕಿವಿಗೆ ಸುರಿಯುವ ಕಾದ ದ್ರವ ನರ ನರಗಳಲ್ಲಿ ಇಳಿದು ಸುಡುತ್ತ ದೇಹವನ್ನೆಲ್ಲ ವ್ಯಾಪಿಸುತ್ತಿತ್ತು. ಕಾಲು ಸೋತು ಮಂಚದಮೇಲೆ ಕುಕ್ಕರಿಸಿದ್ದು ಅವನಿಗೆ ಅರಿವಿಲ್ಲ. ಆಕಡೆಯವ ನಿಲ್ಲಿಸಿದ್ದು ಎಷ್ಟೋ ಹೊತ್ತಿನಮೇಲೆ ಗೊತ್ತಾಗಿತ್ತು. ಈಕಡೆ ಕಿಟಕಿಯ ಹತ್ತಿರ ಹಾಸಿನಿ ಯಾರೊಂದಿಗೋ ಮಾತಾಡುತ್ತಿದ್ದುದು '...ಫೋನಿಡೋ ಬೀದಿನಾಯಿ' ಅಂತ ಗದರಿಸಿದ್ದು ದೂರದ ಯಾವುದೊ ಘಟನೆ ಎಂಬಂತೆ ಪ್ರಜ್ಞೆಯಲ್ಲಿ ಮಸುಕಾಗಿ ದಾಖಲಾಗಿತ್ತು. ಎಷ್ಟು ಕ್ಷಣ ಕಳೆದಿತ್ತೊ ಅವಳು ಅವನ ಪಕ್ಕ ಕುಳಿತಿದ್ದಳು. ಅವನ ತೊಡೆಯಮೇಲೆ ಕೈಯಿಟ್ಟು, 'ನೀವ್ಯಾಕೆ ಉಗಿದು ಫೋನಿಡಲಿಲ್ಲ?'

'ನಿಂಗೆ ಹ್ಯಾಗೆ ಗೊತ್ತು?'

'ಲೋಫರ್ ನಂಗೂ ಫೋನು ಮಾಡಿದ್ದ. ನಿಂಗೆ ಏನೇನು ಹೇಳಿರಬಹುದು ಅನ್ನೋ ಕಲ್ಪನೆ ನನಗಿದೆ. ನನ್ನ ಆತ್ಮಗೌರವ ಘನತೆ ಏನು ಅಂತ ನನಗೆ ಗೊತ್ತು, ಯಾರಿಗೂ ಅದನ್ನ ಸಾಬೀತು ಮಾಡಬೇಕಿಲ್ಲ. ಆ ಕುರಿ ಗಡ್ಡದ ಸಣಕಲ ಹತ್ತುಪೈಸೆ ಗಳಿಸೊ ತಾಕತ್ತಿಲ್ಲದ ಯಾವುದೇ ಗುರಿಯಿಲ್ಲದ ಸೋಗಲಾಡಿ. ಅಪ್ಪ ಸರಿಯಾಗೆ ಅವನ ಬೆಲೆ ಕಟ್ಟಿದ್ದರು. ಗಟಾರದ ಕೊಳಕು ವಿಷವನ್ನೆಲ್ಲ ಮನಸಲ್ಲಿ ತುಂಬಿಕೊಂಡಿದಾನೆ ಅಂತ ಈಗ ಗೊತ್ತಾಯ್ತು.'

'ನನ್ನ ಯೋಗ್ಯತೆಗೆ ಮೀರಿದ್ದಕ್ಕೆ ಕೈ ಚಾಚಿಬಿಟ್ಟೆನೊ ಅನಿಸ್ತಿದೆ' ಅಂದಿದ್ದ ಸೋತ ಸ್ವರದಲ್ಲಿ.

ಅವಳು ಅವನ ಕೊರಳ ಸುತ್ತ ಕೈ ಬಳಸಿ ಮೆತ್ತಗೆ ತನ್ನ ತೊಡೆಯ ಮೇಲೆ ಅವನ ತಲೆಯಿರಿಸಿಕೊಂಡಳು.

'ಚಿಕ್ಕದಕ್ಕು ಘಾಸಿಯಾಗೊ ಚಿಕ್ಕಮಗು ನೀನು. ನಿನ್ ಯೋಗ್ಯತೆ ಏನು ಅಂತ ಅಪ್ಪ ಅಳೆದಿದಾರೆ; ಫ್ಯಾಕ್ಟರಿ ಲೆಕ್ಕ ಹೇಳತಿದೆ. ನಂಗು ಗೊತ್ತಿದೆ.'

'ಅವನು ಹಾಗೆ ಮಾತಾಡತಿದ್ರೆ ನೀನು ವಿರೋಧಿಸಿ ದಬಾಯಿಸಿಬಿಟ್ಟೆ. ಅದೇ ನಾನು ಕುಸೀತಾ ಹೋದೆ. ಈ ಆತ್ಮವಿಶ್ವಾಸ ನಿನ್ನ ಹಿನ್ನೆಲೆಯದು, ಅಂತಸ್ತಿನದು.'

'ಅದಲ್ಲ. ವಿಷಯಕ್ಕೆ ಸಂಬಂಧಿಸಿದ ಘಟನೆಗಳ ಪ್ರಭಾವ ಇಬ್ಬರಮೇಲೂ ಭಿನ್ನವಾಗಿದೆ. ಹೀಗಾಗಿ ಭಿನ್ನವಾಗೆ ಪ್ರತಿಕ್ರಿಯಿಸಿದೀವಿ. ಹೆಚ್ಚು ಕಮ್ಮಿ ಅಂತ ಇಬ್ಬರೂ ಅಲ್ಲ. ಬಾ ಈಗ...' ಅಪ್ಪಿಕೊಳ್ಳಲು ಮುಂದಾಗುತ್ತಿದ್ದಂತೆ 'ದಾನ ಅಂತೆಲ್ಲ...' ಹಿಂಜರಿದ. 'ಸರಿ ಹೋಯ್ತು! ನನ್ನ ಮನಸಲ್ಲಿ ಕೂಡಿಬಿದ್ದ ಅಸಮಾಧಾನವೂ ಸಮರ್ಥನೀಯ ತಾನೆ? ನಿನ್ನೆದುರು ಹೊರಹಾಕಿದೆ, ತಪ್ಪೇನಿತ್ತು ಅದರಲ್ಲಿ?